ಸಾಕ್ಷಿಯನ್ನು ದಿನಾಂಕಃ **24.05.2022** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಸ್ ಎಸ್ ವಕೀಲರಿಂದಃ-

ನನ್ನ ಊರು ಗೊದ್ದನಪುರ. 1 ನೇ ಪ್ರತಿವಾದಿ ನನ್ನ ತಾಯಿ, 2 ನೇ ಪ್ರತಿವಾದಿ ನನ್ನ ತಂದೆ. ನಾನು ವಾದಿಯ ಪರವಾಗಿ ಸಾಕ್ಷಿಯನ್ನು ನುಡಿಯಲು ಬಂದಿರುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ಸಾಕ್ಷ್ಯದ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ. ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನಾನು ಕನ್ನಡ ಭಾಷೆಯಲ್ಲಿ ಸಹಿಯನ್ನು ಮಾಡಿರುತ್ತೇನೆ. ಸಾಕ್ಷ್ಯದ ಪ್ರಮಾಣ ಪತ್ರಿಕೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ದಾವಾ ಸ್ವತ್ತನ್ನು ನಾನು ನೋಡಿದ್ದೇನೆ. ದಾವಾ ಸ್ವತ್ತು ಖುಷ್ಕಿ ಜಮೀನಾಗಿರುತ್ತದೆ. ದಾವಾ ಸ್ವತ್ತನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ. ದಾವಾ ಸ್ವತ್ತಿನ ಕುರಿತು ರೂ. 2 ಲಕ್ಷ ಪ್ರತಿಫಲದ ಮೊತ್ತಕ್ಕೆ ಮಾತುಕತೆಯಾಗಿತ್ತು. ಕರಾರು ಏರ್ಪಟ್ಟ ಕಾಲಕ್ಕೆ ನಾನು ಹಾಜರಿದ್ದೆನು. ಸದರಿ ಕಾಲಕ್ಕೆ ನಾನು, ನನ್ನ ತಂದೆ, ತಾಯಿ, ನನ್ನ ಅಣ್ಣ ಮತ್ತು ಅಕ್ಕ ಇದ್ದೆವು. ಸದರಿ ಕರಾರು ಪತ್ರವನ್ನು ನಂಜನಗೂಡಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಎದುರುಗಡೆ ಇರುವ ಅಂಗಡಿಯಲ್ಲಿ ತಯಾರಿಸಲಾಗಿತ್ತು. ಕ್ರಯದ ಕರಾರಿನ ಕುರಿತು ನನಗೂ ಕೂಡ ಒಪ್ಪಿಗೆ ಇತ್ತು. ದಾವಾ ಸ್ವತ್ತಿನ ಅಜೂ ಬಾಜಿನ ಜಮೀನುಗಳ ಮೌಲ್ಯದ ಕುರಿತು ಮಾಹಿತಿ ಇತ್ತು. ದಾವಾ ಸ್ವತ್ತಿನ ಅಜೂ ಬಾಜಿನಲ್ಲಿ ಕೈಗಾರಿಕಾ ಘಟಕಗಳು ಇಲ್ಲ. ದಾವಾ ಸ್ವತ್ತು ಇರುವ ಪ್ರದೇಶದಲ್ಲಿ ಸರ್ಕಾರವು ಒಂದು ಎಕರೆಗೆ ರೂ. 35 ಲಕ್ಷ ಮೌಲ್ಯವನ್ನು ನಿಗದಿಪಡಿಸಿರುವ ಕುರಿತು ನನಗೆ ಗೊತ್ತಿಲ್ಲ. ಕ್ರಯದ ಕರಾರು ಏರ್ಪಟ್ಟ ಕಾಲಕ್ಕೆ ದಾವಾ ಸ್ವತ್ತು ಇರುವ ಪ್ರದೇಶದಲ್ಲಿ 01 ಎಕರೆಗೆ ರೂ. 2 ಲಕ್ಷ ಮೌಲ್ಯವಿದ್ದು, ಈಗಲೂ ಕೂಡ ಅದೇ ಮೌಲ್ಯವಿದೆ. ಕ್ರಯದ ಕರಾರು ಪತ್ರ ಏರ್ಪಟ್ಟ ಕಾಲಕ್ಕೆ ಹಾಗೂ ಈಗ ದಾವಾ ಸ್ವತ್ತು ಇರುವ ಪ್ರದೇಶದಲ್ಲಿ01 ಎಕರೆ ಮೌಲ್ಯ ಉಪನೋಂದಣಾಧಿಕರಿಯ ಕಛೇರಿಯ ಪ್ರಕಾರ ರೂ. 35 ಲಕ್ಷ ಇದೆ ಎಂದರೆ ಸರಿಯಲ್ಲ. ಕ್ರಯದ ಕರಾರುಪತ್ರ ಏರ್ಪಟ್ಟ ಕಾಲಕ್ಕೆ ರೂ 1 ಲಕ್ಷ 90 ಸಾವಿರ ಮೊತ್ತವನ್ನು ನಗದು ರೂಪದಲ್ಲಿ ಪಾವತಿಸಿರುತ್ತಾರೆ. ಕ್ರಯದ ಕರಾರುಪತ್ರ ಏರ್ಪಟ್ಟ ಕಾಲಕ್ಕೆ ಕ್ರಯ ನೋಂದಣೆಗಾಗಿ 06 ತಿಂಗಳ ಕಾಲಾವಧಿಯನ್ನು ನಿಗದಿಪಡಿಸಲಾಗಿತ್ತು. 06 ತಿಂಗಳ ನಂತರ ಕ್ರಯ ನೋಂದಣಿ ಯನ್ನು ಮಾಡಿ ಕೊಟ್ಟಿಲ್ಲ. ದಾವಾ ಸ್ವತ್ತಿನ ಕುರಿತಾಗಿ ಕ್ರಯದ ಕರಾರುಪತ್ರ ಏರ್ಪಟ್ಟ ಕಾಲಕ್ಕೆ ಇತರೆ ಯಾವುದೇ ಕ್ರಯದ ಕರಾರು ಪತ್ರ ಏರ್ಪಟ್ಟಿಲ್ಲ. ನಾನು ಅದೇ ದಿನದಂದು ಇತರೆ ಯಾವುದೇ ಕ್ರಯದ ಕರಾರುಪತ್ರವನ್ನು ಜಾರಿ ಮಾಡಿಕೊಟ್ಟಿಲ್ಲ. ನನ್ನ ತಂದೆ ತಾಯಿ ಅವಿದ್ಯಾವಂತರು ಎಂದರೆ ಸರಿ. ವಾದಿ ನನ್ನ ತಂದೆಯ ಅಕ್ಕನ ಮಗ. ನನ್ನ ತಂದೆ ಮತ್ತು ತಾಯಿಗೆ ರೂ. 35 ಲಕ್ಷ ಬೆಲೆ ಬಾಳುವ ಸ್ವತ್ತನ್ನು ರೂ.2 ಲಕ್ಷ ಮೌಲ್ಯಕ್ಕೆ ಕ್ರಯದ ಕರಾರು ಮಾಡಿ ಕೊಡುವ ಅಗತ್ಯತೆ ಇಲ್ಲದಾಗ್ಯೂ ಕೂಡ ನನ್ನ ತಂದೆ ಮತ್ತು ತಾಯಿಯ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ವಾದಿಯಿಂದ ಪಡೆದ ರೂ. 2 ಲಕ್ಷದ ಸಾಲದ ಭದ್ರತೆಗಾಗಿ ಕ್ರಯದ ಕರಾರುಪತ್ರವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ ನಾನು ಎಲ್ಲಾ ದಾಖಲಾತಿಗಳಿಗೂ ಒಂದೇ ರೀತಿಯಾಗಿ ಸಹಿ ಮಾಡುತ್ತೇನೆ. ನನಗೆ ವಕೀಲರ ಮೂಲಕ ನೋಟಿಸ್‌ನ್ನು

ಜಾರಿಗೊಳಿಸಿದ್ದು ಸದರಿ ನೋಟಿಸ್‌ನ್ನು ಸ್ವೀಕರಿಸಿರುತ್ತೇನೆ.

ನಿಪಿ - 1 ರ ಕ್ರಯದ ಕರಾರುಪತ್ರದಲ್ಲಿರುವ ಸಹಿ ಹಾಗೂ ನಿಪಿ- 11 ರಲ್ಲಿರುವ ಶಿವನಂಜು ಎಂಬ ಸಹಿ ನನ್ನದೇ ಆಗಿರುತ್ತದೆ. ನಿಪಿ - 5 ರ ನೋಟಿಸ್‌ಗೆ ನಾನು ಉತ್ತರವನ್ನು ನೀಡಿರುತ್ತೇನೆ. ದಾವಾ ಸ್ವತ್ತು ನನ್ನ ತಾಯಿಗೆ ಆಕೆಯ ತಂದೆಯ ಕಡೆಯಿಂದ ಬಂದಿರುತ್ತದೆ. ನಾನು ನನ್ನ ತಂದೆ ತಾಯಿಯೊಂದಿಗೆ ಅನ್ಯೋನ್ಯವಾಗಿದ್ದೇನೆ. ನಾನು ನನ್ನ ತಂದೆ ತಾಯಿಯಿಂದ ಬೇರೆಯಿದ್ದು, ವಾದಿಯೊಂದಿಗೆ ಸೇರಿಕೊಂಡು ದಾವಾ ಸ್ವತ್ತನ್ನು ವಾದಿಗೆ ಬರೆದುಕೊಡುವಂತೆ ಒತ್ತಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಸಹಿ/-
ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು